ಕ್ರೀಡಾಂಗಣ ಅಭಿವೃದ್ಧಿ

77 (1667); ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ಬಾಗಲಕೋಟೆ ಜಿಲ್ಲೆ ಮುಧೋಳದಲ್ಲಿರುವ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) 2013–14ನೇ ಸಾಲಿನಲ್ಲಿ ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ₹ 36.19 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದರೂ ಸಹ ಇಲಾಖೆಯು ಕಾಮಗಾರಿಯನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಬಾಗಲಕೋಟೆ ಜಿಲ್ಲೆ ಮುಧೋಳದಲ್ಲಿರುವ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಷಟಲ್ ಬ್ಯಾಡ್ಮಿಂಟನ್ ಕ್ರೀಡಾಂಗಣವನ್ನು ನಿರ್ಮಿಸಲಾಗಿದ್ದು, ಸದರಿ ಒಳಾಂಗಣ ಕ್ರೀಡಾಂಗಣವು ಮರದ ನೆಲಹಾಸನ್ನು ಹೊಂದಿದೆ. ಈ ಕ್ರೀಡಾ ಅಂಕಣವನ್ನು ಸಾರ್ವಜನಿಕರು ಮತ್ತು ಕ್ರೀಡಾಪಟುಗಳು ಬಳಕೆ ಮಾಡುತ್ತಿದ್ದಾರೆ. ಅಲ್ಲದೇ, ಮುಧೋಳ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಚಟುವಟಿಕೆ ಅಂಗವಾಗಿ ಮಲ್ಟಿಜಿಮ್ ಸೌಲಭ್ಯ ಕಲ್ಪಿಸಲಾಗಿದೆ. ಮುಧೋಳ ಪಟ್ಟಣದಲ್ಲಿ ಸಾರ್ವಜನಿಕರ ಬಳಕೆಗಾಗಿ ಆಧುನಿಕ ಗುಣಮಟ್ಟದ ಕುಸ್ತಿ ಮ್ಯಾಟ್ ಒದಗಿಸಲಾಗಿದ್ದು, ಕ್ರೀಡಾಪಟುಗಳು ಬಳಕೆ ಮಾಡುತ್ತಿದ್ದಾರೆ.

ಆ) ಬಂದಿದೆ.

ಇ) ಪ್ರಸ್ತುತ, ರಾಜ್ಯದಾದ್ಯಂತ ಬಾಕಿ ಇರುವ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆಯನ್ನು ನೀಡಲಾಗಿದ್ದು, 2015–16 ನೇ ಸಾಲಿನಲ್ಲಿ ಸದರಿ ಕ್ರೀಡಾ ಸೌಲಭ್ಯ ಉನ್ನತೀಕರಣ ಕಾಮಗಾರಿಗೆ ಆಯವ್ಯಯ ಕೊರತೆ ಹಿನ್ನೆಲೆಯಲ್ಲಿ ಯಾವುದೇ ಅನುದಾನ ಮೀಸಲಿಟ್ಟಿರುವುದಿಲ್ಲ. ಹಣಕಾಸಿನ ಲಭ್ಯತೆ ಆಧರಿಸಿ, ನಿಯಮಾನುಸಾರ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಓದಗಿಸಿದ್ದಾರೆ. ಮೊದಲನೆಯದಾಗಿ 2013–14ನೇ ಸಾಲಿನಲ್ಲಿ ಮುಧೋಳದ ಒಳಾಂಗಣ ಕ್ರೀಡಾಂಗಣಕ್ಕೆ ₹ 36.19 ಲಕ್ಷಗಳ ಅನುದಾನ ಕೊಟ್ಟಿದ್ದರೂ ಇದುವರೆಗೂ ಕೆಲಸ ಪ್ರಾರಂಭ ಮಾಡಲಿಲ್ಲ ಏಕೆ? ಎರಡನೆಯದಾಗಿ, 2015–16ನೇ ಸಾಲಿನಲ್ಲಿ ಒಂದು ಕೋಟಿ ರೂ. ಗಳ ಅನುದಾನ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು):– ಮಾನ್ಯ ಅಧ್ಯಕ್ಷರೆ, 2000–01ನೇ ಸಾಲಿನಲ್ಲಿ ಒಳಾಂಗಣ ಕ್ರೀಡಾಂಗಣವನ್ನು ಸುಮಾರು 25 ಲಕ್ಷ ರೂ. ಗಳ ವೆಚ್ಚದಲ್ಲಿ ಸ್ಥಳೀಯ ಮೂಲಗಳ ಅನುದಾನದಿಂದ ನಿರ್ಮಿಸಲಾಗಿದೆ. ಅಲ್ಲಿ ಸ್ಥಳೀಯ ಜಿಲ್ಲಾಪಂಚಾಯತ್ ಬೇರೆ ಬೇರೆ ಹಣವನ್ನು ಉಪಯೋಗಿಸಿ ಒಳ್ಳೆಯ ರೀತಿಯಲ್ಲಿ ಮಾಡಿದ್ದಾರೆ. 2008–09ನೇ ಸಾಲಿನಲ್ಲಿ ಸ್ಥಳೀಯ ಮೂಲಗಳ ಅನುದಾನದಿಂದ ಸುಮಾರು ಐದೂವರೆ ಲಕ್ಷ ರೂ. ಗಳ ವೆಚ್ಚದಲ್ಲಿ . .

ಶ್ರೀ ಗೋವಿಂದ ಎಂ. ಕಾರಜೋಳ:– ಸಾರ್, ನಾನು ಹಿಂದಿನ ವರ್ಷಕ್ಕೆ ಹೋಗುವುದಿಲ್ಲ. 2013–14ನೇ ಸಾಲಿನದ್ದು ಕೇಳುತ್ತಿದ್ದೇನೆ.

ಶ್ರೀ ಕೆ. ಅಭಯಚಂದ್ರ:– ಹೇಳುತ್ತೇನೆ. ಅದೇ ರೀತಿ 2012–13ನೇ ಸಾಲಿನಲ್ಲಿ ಸುಮಾರು ಆರು ಲಕ್ಷ ರೂ. ಗಳ ಅನುದಾನವನ್ನು ಕುಸ್ತಿ mat ಗಾಗಿ ರಾಜ್ಯ ಸರ್ಕಾರದ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅನುದಾನದ

ಅಡಿಯಲ್ಲಿ ಒದಗಿಸಲಾಗಿದೆ. ಒಳಾಂಗಣ ಕ್ರೀಡಾಂಗಣದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳ್ಳಲು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ DYSI ಕ್ರೀಡಾ ಯೋಜನೆಯಲ್ಲಿ . . .

ಅಧ್ಯಕ್ಷರು:– ಮಾನ್ಯ ಸಚಿವರೆ ಸಂಕ್ಷಿಪ್ತವಾಗಿ ಹೇಳಿ. 2013–14ನೇ ಸಾಲಿನಲ್ಲಿ ಒಳಾಂಗಣ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ₹ 36.19 ಲಕ್ಷಗಳಿಗೆ ಅಡಳಿತಾತ್ಮಕ ಅನುಮೋದನೆ ದೊರೆತಿದ್ದರೂ ಸಹ ಇಲಾಖೆಯು ಕಾಮಗಾರಿಯನ್ನು ಏಕೆ ಪ್ರಾರಂಭ ಮಾಡಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಅಭಯಚಂದ್ರ:– ಪ್ರಸ್ತುತ, ರಾಜ್ಯದಾದ್ಯಂತ ಬಾಕಿ ಇರುವ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆಯನ್ನು ನೀಡಲಾಗಿದ್ದು, 2015–16ನೆ ಸಾಲಿನಲ್ಲಿ ಸದರಿ ಕ್ರೀಡಾ ಸೌಲಭ್ಯ ಉನ್ನತೀಕರಣ ಕಾಮಗಾರಿಗೆ ಆಯವ್ಯಯದ ಕೊರತೆ ಹಿನ್ನೆಲೆಯಲ್ಲಿ ಯಾವುದೇ ಅನುದಾನ ಮೀಸಲಿಟ್ಟಿರುವುದಿಲ್ಲ. ಆದರೆ ಆದ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆ ಬಹಳ simple ಆಗಿದೆ. 2013–14ನೇ ಸಾಲಿನಲ್ಲಿ ಮುಧೋಳದ ಒಳಾಂಗಣ ಕ್ರೀಡಾಂಗಣದ ಅಭಿವೃದ್ಧಿಗೆ ₹ 36.19 ಲಕ್ಷಗಳು ಮಂಜೂರಾಗಿದೆ. Administrative approval ಕೊಟ್ಟಿದ್ದಾರೆ. Technical sanction ಆಗಿದೆ. ಆದರೂ ಕೆಲಸ ಪ್ರಾರಂಭ ಮಾಡಲು ಏಕೆ ವಿಳಂಬ?

ಶ್ರೀ ಕೆ. ಅಭಯಚಂದ್ರ:– 2013–14ನೇ ಸಾಲಿನಲ್ಲಿ sanction ಆಗಿದೆ. ಅನುದಾನದ ಕೊರತೆ ಇದೆ. ಆದ್ದರಿಂದ ಆದ್ಯತೆಯ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಸುನೀಲ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ₹ 36 ಲಕ್ಷಗಳು sanction ಆಗಿರುವುದಕ್ಕೆ ಅನುದಾನದ ಕೊರತೆ ಇದೆ ಎಂದರೆ ಏನರ್ಥ?

ಶ್ರೀ ಕೆ. ಅಭಯಚಂದ್ರ:– ಅನುದಾನದ ಕೊರತೆ ಇದೆ. ಆದ್ಯತೆಯ ಮೇರೆಗೆ ಕಾಮಗಾರಿಗಳನ್ನು ತೆಗೆದುಕೊಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಕಾಮಗಾರಿಯನ್ನು ಪ್ರಾರಂಭ ಮಾಡಿ.

ಅಧ್ಯಕ್ಷರು:– ಮಾನ್ಯ ಉಮೇಶ್ ವಿ. ಕತ್ತಿಯವರು ಹಾಜರಿಲ್ಲ. ಮಾನ್ಯ ಎಲ್.ಎ. ರವಿಸುಬ್ರಹ್ಮಣ್ಯರವರು ತಮ್ಮ ಪ್ರಶ್ನೆ ಕೇಳುವುದು.

ಹೆದ್ದಾರಿಗಳ ಇಕ್ಕೆಲಗಳಲ್ಲಿ ಹಣ್ಣಿನ ಮರ ಬೆಳೆಸುವುದು

79 (536); ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) ಅರಣ್ಯ ಇಲಾಖೆ ವತಿಯಿಂದ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಹೆದ್ದಾರಿ, ನದಿ ಮತ್ತು ನಾಲೆಯ ದಂಡೆಗಳಲ್ಲಿ ಸಾಲು ಮರಗಳಾಗಿ ಹಣ್ಣಿನ ಮರಗಳಾದ ಹಲಸು, ಮಾವು, ಹುಣಸೆ, ನೇರಳೆ ಮರಗಳನ್ನು ಬೆಳೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಬೆಂಗಳೂರಿನ ಹೊರವಲಯದಲ್ಲಿ ಈ ರೀತಿಯ ಹಣ್ಣಿನ ಮರಗಳನ್ನು ಬೆಳೆಸುವುದರಿಂದ ಪ್ರಾಕೃತಿಕ ಸಮತೋನ ಉಂಟಾಗಿ ವನ್ಯ ಜೀವಿಗಳು ನಾಡಿಗೆ ಬರುವುದನ್ನು ತಡೆಗಟ್ಟಬಹುದಲ್ಲವೇ;

ಇ) ಕಳೆದ 3 ವರ್ಷಗಳಲ್ಲಿ ಹೆದ್ದಾರಿಗಳ ಇಕ್ಕೆಲಗಳಲ್ಲಿ ಎಷ್ಟು ಹಣ್ಣಿನ ಮರಗಳನ್ನು ನೆಡಲಾಗಿದೆ (ಜಿಲ್ಲಾವಾರು ವಿವರ);

ಈ) ಹೆದ್ದಾರಿಗಳಲ್ಲಿ ಹಣ್ಣಿನ ಮರ ನೆಡುವುದನ್ನು ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಕಾನೂನು ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಈ ಕಾನೂನನ್ನು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)